# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007

## <u>ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು</u>

**ದಿನಾಂಕ:06.02.2025**

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

ದೂರವಾಣಿ ಸಂಖ್ಯೆ: 08192-208029, ಫ್ಯಾಕ್ಸ್ ಸಂಖ್ಯೆ: 08192-208008


ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಮಮೃತಂ ಃ

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/680/2024-25/**4163 **ದಿನಾಂಕ:06.02.2025**

**ಇವರಿಗೆ,**

**ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.**

ಮಾನ್ಯರೆ,

**ವಿಷಯ : ದಿನಾಂಕ:06.02.2025 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.**

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:06.02.2025

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:06.02.2025 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಬೆಳಗ್ಗೆ 11:30 ಗಂಟೆಗೆ ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ-III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ **ಏಳು ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

06/02/2025

ಕುಲಸಚಿವರು

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**<u>ಪ್ರತಿಗಳು:</u>**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು-560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು- 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ-577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ-577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ-577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ-577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:06.02.2025 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು:**

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು (ಆನ್‌ಲೈನ್ ಮೂಲಕ ಹಾಜರಿರುವರು): ಸದಸ್ಯರು
3. ಡಾ. ಉಮೇಶ್ ಬಿ. ಎನ್., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು (ಆನ್‌ಲೈನ್ ಮೂಲಕ ಹಾಜರಿರುವರು) : ಸದಸ್ಯರು
4. ಡಾ. ಕೆ.ಟಿ. ನಾಗರಾಜ ನಾಯ್ಕ., ಪ್ರಾಚಾರ್ಯರು : ಸದಸ್ಯರು
5. ಡಾ. ಬಾಬು ಕುಮಾರ್ ಓ., ಪ್ರಾಚಾರ್ಯರು, (ಆನ್‌ಲೈನ್ ಮೂಲಕ ಹಾಜರಿರುವರು) : ಸದಸ್ಯರು
6. ಡಾ. ಗಿರೀಶ್ ಟಿ., ಪ್ರಾಚಾರ್ಯರು : ಸದಸ್ಯರು
7. ಶ್ರೀಮತಿ ಉಷಾ ಎಸ್., ಆರ್, ಪ್ರಾಚಾರ್ಯರು : ಸದಸ್ಯರು
8. ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
9. ಡಾ. ಜಿ. ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು (ಆನ್‌ಲೈನ್ ಮೂಲಕ ಹಾಜರಿರುವರು) : ಸದಸ್ಯರು
10. ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಶ್ರೀ ಪ್ರಶಾಂತ್ ಆರ್. ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಡಾ. ಪ್ರಶಾಂತ ಎನ್. ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
13. ಡಾ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು, ದಾವಣಗೆರೆ ವಿಶ್ವವಿದ್ಯಾನಿಲಯ : ಸದಸ್ಯರು
14. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
15. ಡಾ. ಮಹಾಬಲೇಶ್ವರ ಯು.ಎಸ್., ಕುಲಸಚಿವರು, ಆಡಳಿತ (ಪ್ರಭಾರೆ) : ಸದಸ್ಯ ಕಾರ್ಯದರ್ಶಿ ಹಾಗೂ ಡೀನರು, ವಿಜ್ಞಾನ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ.

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 15 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಹಾಗೂ ಆನ್‌ಲೈನ್ ಮೂಲಕ ಸಭೆಗೆ ಹಾಜರಾಗಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು                ಕುಲಪತಿಗಳು

| ಮಾಸನಿ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.01(a)/(02/25) |

## -: ಟಿಪ್ಪಣಿ :-

ವಿಷಯಃ ಪ್ರೊ. ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು, ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರನ್ನು ಕೇಂದ್ರಿಯ ತನಿಖಾ ದಳ (CBI) ಬಂಧಿಸಿರುವ ಹಿನ್ನೆಲೆಯಲ್ಲಿ ಈ ಕುರಿತು ಚರ್ಚಿಸಿ ಕೆ.ಸಿ.ಎಸ್.ಆರ್ (Karnataka Civil Service Rules - KCSR) ನಿಯಮಾನುಸಾರ ಕ್ರಮಕೈಗೊಳ್ಳುವ ಬಗ್ಗೆ.

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಗಾಯತ್ರಿ ದೇವರಾಜ ಇವರನ್ನು ಕೇಂದ್ರಿಯ ತನಿಖಾ ದಳ (CBI) ನವದೆಹಲಿ ಇವರು ದಿನಾಂಕ:01.02.2025 ರಂದು ಸಂಜೆ Prevention of Corruption Act-1988 ನಿಯಮಗಳಡಿ ಬಂಧಿಸಿರುವುದು ಮಾಧ್ಯಮಗಳ, ದಿನಪತ್ರಿಕೆಗಳ ಹಾಗೂ ಕೇಂದ್ರಿಯ ತನಿಖಾ ದಳ (CBI) Website (https://cbi.gov.in) ಮೂಲಕ ಅಧಿಕೃತವಾಗಿ ದೃಢಪಟ್ಟಿರುತ್ತದೆ. ಆದರೆ, ಇದುವರೆಗೆ CBI ತನಿಖಾ ಕೇಂದ್ರಸ್ಥಾನ ಅಥವಾ ರಾಜ್ಯ ಸರ್ಕಾರದ ಸಂಬಂಧಪಟ್ಟ ಇಲಾಖೆಗಳಿಂದಾಗಲಿ ವಿಶ್ವವಿದ್ಯಾನಿಲಯಕ್ಕೆ ಅಧಿಕೃತವಾಗಿ ತಿಳಿದಿರುವುದಿಲ್ಲ. ತತ್ಸಂಬಂಧ, CBI Website (https://cbi.gov.in) ಮೂಲಕ ಪಡೆಯಲಾಗಿರುವ ಮಾಹಿತಿಯ ಪ್ರತಿಯನ್ನು ಈ ಟಿಪ್ಪಣಿಗೆ ಲಗತ್ತಿಸಿದೆ.

ನಮ್ಮ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತದ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದಂತೆ ಅವಶ್ಯವಿರುವ ಸಂದರ್ಭಗಳಲ್ಲಿ ಸರ್ಕಾರದ K.C.S. ನಿಯಮಗಳನ್ನು ಅನುಸರಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸದರಿ K.C.S (CCA) ನಿಯಮಗಳಲ್ಲಿ ವಿಶ್ವವಿದ್ಯಾನಿಲಯದ ಆಡಳಿತ ವ್ಯವಸ್ಥೆಗೆ ಪೂರಕವಾಗುವ ನಿಯಮಗಳನ್ನು ಅಳವಡಿಸಿಕೊಂಡು ಕ್ರಮಕೈಗೊಳ್ಳಲು ಯು.ಜಿ.ಸಿ. 7ನೇ ಪರಿಷ್ಕೃತ ನಿಯಮ (3) ಉಪನಿಯುಮ 3.1 ರಡಿ ಅವಕಾಶವಿರುತ್ತದೆ.

ಆದುದರಿಂದ, ಸರ್ಕಾರದ K.C.S (CCA) ನಿಯಮ (10) ರ ನಿಯಮಗಳನುಸಾರ ಪ್ರೊ. ಗಾಯತ್ರಿ ದೇವರಾಜ – ಇವರ – ವಿರುದ್ಧ ಶಿಸ್ತು ಕ್ರಮ ಜರುಗಿಸುವುದು ಅಗತ್ಯವೆಂದು ಕಂಡುಬರುತ್ತದೆ. ಸದರಿ K.C.S (CCA) ನಿಯಮಗಳು – ನಿಯಮ (10) ರ ಉಧೃತ ಭಾಗವನ್ನು ಸಭೆಯ ಅವಗಾಹನೆಗೆ ತರಲಾಗಿದೆ.

ಸದರಿ K.C.S (CCA) ನಿಯಮಗಳು – ನಿಯಮ 10 (2) (ಎ) ರನ್ವಯ ಕ್ರಿಮಿನಲ್ ಚಾರ್ಜ್ ಅಥವಾ ಇನ್ನಾವುದೇ ಆರೋಪಗಳನ್ವಯ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಬಂಧನಕ್ಕೊಳಪಟ್ಟು 48 ಗಂಟೆಗಳು ಅದಕ್ಕೂ ಹೆಚ್ಚಿನ ಅವಧಿಗೆ ಸಂಬಂಧಪಟ್ಟ ಇಲಾಖೆಯ ಸುಪರ್ದಿಯಲ್ಲಿದ್ದರೆ, ಅಂತಹ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲು ನಿಯಮಗಳಲ್ಲಿ ಅವಕಾಶವಿರುತ್ತದೆ.

ಮುಂದುವರೆದಿದೆ...

ಕುಲಸಚಿವರು

ಕುಲಪತಿಗಳು

ಮೇಲ್ಕಂಡ ವಿವರಗಳ ಹಿನ್ನೆಲೆಯಲ್ಲಿ ಪ್ರೊ. ಗಾಯತ್ರಿ ದೇವರಾಜ, ಪ್ರಾಧ್ಯಾಪಕರು – ಇವರನ್ನು ದಿನಾಂಕ:01.02.2025 ರಂದು CBI ನಿರ್ದೇಶನಾಲಯದವರು ಬಂಧಿಸಿದ್ದು ಈಗಾಗಲೇ ಐದು ದಿನಗಳಾಗಿರುವುದರಿಂದ ಅವರ ವಿರುದ್ಧ ಸದರಿ K.C.S (CCA) ನಿಯಮಗಳನುಸಾರ ಶಿಸ್ತು ಕ್ರಮ ಜರುಗಿಸುವ ಬಗ್ಗೆ ದಿನಾಂಕ:06.02.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಸಲ್ಲಿಸಿದೆ.

**ಮಾಹಿತಿ:**

ಪ್ರೊ. ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮ ಜೀವಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ – ಇವರನ್ನು – ಭ್ರಷ್ಟಾಚಾರದ ಆರೋಪಗಳಡಿ, CBI ನಿರ್ದೇಶನಾಲಯ, ನವದೆಹಲಿ ಇವರು ದಿನಾಂಕ:01.02.2025ರಂದು ಸಂಜೆ – ಗುಂಟೂರು, ಆಂಧ್ರಪ್ರದೇಶ – ಇಲ್ಲಿ ಬಂಧಿಸಿರುವ ಬಗ್ಗೆ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಸದರಿಯವರ ಬಂಧನದ ಬಗ್ಗೆ ವಿಶ್ವವಿದ್ಯಾನಿಲಯಕ್ಕೆ CBI ಸಂಸ್ಥೆಯಿಂದ ಅಥವಾ ಸಂಬಂಧಪಟ್ಟ ಸರ್ಕಾರದ ಕಾರ್ಯಾಲಯಗಳಿಂದ ಅಧಿಕೃತವಾಗಿ ಯಾವುದೇ ಮಾಹಿತಿಯು ಬಂದಿರುವುದಿಲ್ಲ. ಆದರೆ ತತ್ಸಂಬಂಧ, ದಿನಪತ್ರಿಕೆಗಳು, ಎಲೆಕ್ಟ್ರಾನಿಕ್ ಮಾಧ್ಯಮಗಳು ಹಾಗೂ CBI ವೆಬ್‌ಸೈಟ್ ಮೂಲದಿಂದ ಅಧಿಕೃತ ಮಾಹಿತಿ ಲಭ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ದೂರವಾಣಿ ಮೂಲಕ ಪಡೆಯಲಾಗಿದ್ದು, ಅವರ ಅಭಿಪ್ರಾಯದಂತೆ CBI ವೆಬ್‌ಸೈಟ್‌ನಲ್ಲಿ ಪ್ರಕಟವಾಗಿರುವ ಮಾಹಿತಿಯನ್ನು ಅಧಿಕೃತ ದಾಖಲೆಗಳೆಂದು ಪರಿಗಣಿಸಲು ತಿಳಿಸಿರುತ್ತಾರೆ. ಆದುದರಿಂದ, ಪ್ರೊ. ಗಾಯತ್ರಿ ದೇವರಾಜ ಇವರ ವಿರುದ್ಧ ಸರ್ಕಾರದ CCA ನಿಯಮಗಳನುಸಾರ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸಭೆಯನ್ನು ಆಯೋಜಿಸಲಾಗಿದೆಂಬುದನ್ನು ಸಭೆಗೆ ತಿಳಿಸಿದರು.

ಅಲ್ಲದೆ, ಯು.ಜಿ.ಸಿ 7ನೇ ಪರಿಷ್ಕೃತ ವೇತನ ನಿಯಮಗಳು, ನಿಯಮ 3.1 ರನ್ವಯ ನೇಮಕಾತಿಗಳು ಹಾಗೂ ಇನ್ನಿತರ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ KCS ನಿಯಮಗಳನುಸಾರ ಕ್ರಮಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಬೋಧಕರ ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದಂತೆ KCS ನಿಯಮಗಳನ್ನು ಅನುಸರಿಸಲಾಗುತ್ತಿದ್ದು, ಪ್ರಸ್ತುತದಲ್ಲಿಯೂ KCS (CCA) ನಿಯಮಗಳನ್ನು ಅಳವಡಿಸಿಕೊಂಡು ಶಿಸ್ತುಕ್ರಮ ಜರುಗಿಸಬಹುದೆಂದು ಸಭೆಗೆ ತಿಳಿಸಿದರು. ಈ ಹಿನ್ನೆಲೆಯಲ್ಲಿ KCS (CCA) ನಿಯಮಗಳು – ನಿಯಮ 10 (2) (a) ರನ್ವಯ ಕ್ರಮಕೈಗೊಳ್ಳುವ ಬಗ್ಗೆ ಸಭೆಯ ಗಮನಕ್ಕೆ ತಂದರು.

ಕುಲಸಚಿವರು

ಕುಲಪತಿಗಳು

## :: ನಿರ್ಣಯ ::

1. ಕಾರ್ಯಾಲಯದ ಟಿಪ್ಪಣಿಯನ್ನು, ಮಾನ್ಯ ಕುಲಪತಿಗಳು ಸಭೆಗೆ ನೀಡಿದ ವಿವರಗಳನ್ನು ಹಾಗೂ CBI ನಿರ್ದೇಶನಾಲಯದ ವೆಬ್‌ಸೈಟ್ ಮಾಹಿತಿಯನ್ನು ಸಭೆಯು ಗಮನಿಸಿತು. ಪ್ರೊ. ಗಾಯತ್ರಿ ದೇವರಾಜ – ಹಿರಿಯ ಪ್ರಾಧ್ಯಾಪಕರು – ಇವರನ್ನು ದಿನಾಂಕ:01.02.2025 ರಂದು ಬಂಧಿಸಲಾಗಿದ್ದು, ಈಗಾಗಲೇ 05 (ಐದು) ದಿನಗಳು ಮುಗಿದಿರುವುದರಿಂದ KCS (CCA) ನಿಯಮಗಳು, ನಿಯಮ 10 (2) (a) ರನ್ವಯ – ಸದರಿಯವರ ಸೇವೆಯನ್ನು CBI ನಿರ್ದೇಶನಾಲಯದ ಮುಂದಿನ ಆದೇಶ ಬರುವವರೆಗೆ ಅಮಾನತ್ತಿನಲ್ಲಿಡಲು ನಿರ್ಣಯಿಸಲಾಯಿತು.

2. ಅಲ್ಲದೆ, ಈ ಸಂಬಂಧ ವಿಶ್ವವಿದ್ಯಾನಿಲಯದಿಂದ ಕೈಗೊಂಡ ಕ್ರಮವನ್ನು ಗೌರವಾನ್ವಿತ ರಾಜ್ಯಪಾಲರು ಹಾಗೂ ಕುಲಾಧಿಪತಿಗಳ ಅನುಮೋದನೆಗೆ ಸಲ್ಲಿಸಲು ನಿರ್ಣಯಿಸಲಾಯಿತು.

3. ತತ್ಸಂಬಂಧ, ವಿಶ್ವವಿದ್ಯಾನಿಲಯವು ಕೈಗೊಂಡ ಕ್ರಮವನ್ನು ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯ ಅವಗಾಹನೆಗೆ ಸಲ್ಲಿಸಲು ನಿರ್ಣಯಿಸಲಾಯಿತು.

4. ಪ್ರೊ. ಗಾಯತ್ರಿ ದೇವರಾಜ, ಹಿರಿಯ ಪ್ರಾಧ್ಯಾಪಕರು – ಇವರ ಬಂಧನ ಮತ್ತು ಅಮಾನತ್ತಿನ ಬಗ್ಗೆ ಗೌರವಾನ್ವಿತ ಕುಲಾಧಿಪತಿಯವರ ಕಾರ್ಯಾಲಯದಿಂದ ಅಥವಾ ಸರ್ಕಾರದ ವತಿಯಿಂದ ಯಾವುದಾದರೂ ಮಾಹಿತಿಯನ್ನು ಅಪೇಕ್ಷಿಸಿದಲ್ಲಿ, ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಭೆಯು ನಿರ್ಣಯಿಸಿತು.

ಕುಲಸಚಿವರು                                        ಕುಲಪತಿಗಳು

**EXPLANATION:**

While addressing the Hon'ble Members of the Syndicate, the Vice-Chancellor has briefed about the arrest of Prof. Gayathri Devaraja, Senior Professor of Microbiology – during the NAAC visit at Guntur in Andhra Pradesh.

The Central Bureau of Investigation (CBI) has arrested Prof. Gayathri Devaraja on 01.02.2025 as per the provisions of Prevention of Corruption Act-1988 on the grounds of corruption, as noticed/published in the National Dailies, Electronic Media and also Official announcement by the CBI on its Official website.

Further, he explained that there were no Official Communication either from the CBI headquarters Or from the related Government offices Or NAAC Directorate about the arrest of Prof. Gayathri Devaraja. In this connection the University has sought the opinion of the University Legal Advisors over phone. As per their suggestion, the University has collected the information published on the Official Website of CBI Directorate and therefore, the University shall have to initiate disciplinary measures as per KCS (CCA) Rules, since the University has been following the KCS Rules as per the clause 3.1 of UGC 7$^{th}$ Revised Pay Scales for all Administrative purposes in respect of Teaching Staff.

As per CCA Rues vide Rule 10 (2) (a) the University (Govt.) Officials who have been detained in Custody, whether on a criminal charge Or otherwise for a period exceeding forty-eight hours – shall have to be placed under suspension.

Since, the arrest of Prof. Gayathri Devaraja, Senior Professor was made on 01.02.2025 and has now completed 05 (FIVE) days. Therefore, the Syndicate has to take a decision to place Prof. Gayathri Devaraja under suspension as per the provisions of KCS (CCA) Rules, vide Rule 10 (2) (a).

**RESOLUTION :**

1. After perusing the Official Note of the University and the explanation of the Hon'ble Vice-Chancellor regarding the arrest of Prof. Gayathri Devaraja, Senior Professor of Microbiology on 01.02.2025 at Gunturu, Andhrapradesh, the Syndicate has decided to place Prof. Gayathri Devaraja under suspension as per the provisions of KCS (CCA) Rules vide Rule 10 (2) (a).
2. It was further resolved that the decision of the Syndicate shall be submitted to the Hon'ble Governor and the Chancellor for approval.
3. The decision of the Syndicate shall also be submitted to the Department of Higher Education, Government of Karnataka for kind needful action and orders.
4. The Syndicate has further resolved to authorize the Hon'ble Vice-Chancellor to take suitable action to provide information if sought by the Hon'ble Governor and the Chancellor Or the Department of Higher Education, Government of Karnataka regarding the arrest and also the suspension of Prof. Gayathri Devaraja.

Registrar

Vice-Chancellor

| ಪರೀಕ್ಷಾಂಗ ವಿಭಾಗ | |
|---|---|
| ವಿಷಯ ಸಂಖ್ಯೆ: | ಸಿಂ.02(a)/(02/25) |

## –: ಟಿಪ್ಪಣಿ :–

ವಿಷಯಃ **SEP (State Education Policy) ಸ್ಕೀಂ ಸ್ನತಕ ಪದವಿ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 16 ಸಂಖ್ಯೆಯಂತೆ ಪ್ಯಾಕೇಜ್ ಮಾಡಿ ಮೌಲ್ಯಮಾಪನಕ್ಕಾಗಿ ವಿತರಿಸುವ ಕುರಿತು.**

ಉಲ್ಲೇಖ: ಅಧ್ಯಕ್ಷರು, ದಾವಣಗೆರೆ ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ, ಇವರ ಮನವಿ ಪತ್ರ ದಿನಾಂಕ:22.01.2025

*********

ವಿಶ್ವವಿದ್ಯಾನಿಲಯದ ಸ್ನಾತಕ ಪದವಿಯ CBCS Scheme ನಲ್ಲಿ 03 ಗಂಟೆಗಳ ಅವಧಿಯ 80 ಅಂಕಗಳಿಗೆ ನಡೆಸಲಾದ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 16 ಸಂಖ್ಯೆಯಂತೆ ಪ್ಯಾಕೇಟ್ ಮಾಡಿ ಮೌಲ್ಯಮಾಪಕರಿಗೆ ಮೌಲ್ಯಮಾಪನಕ್ಕಾಗಿ ವಿತರಿಸಲಾಗುತ್ತಿತ್ತು.

NEP (National Education Policy) Scheme ನ 02 ಗಂಟೆಗಳ ಅವಧಿಯು 60 ಅಂಕಗಳಿಗೆ ನಡೆಸಲಾದ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 20 ಸಂಖ್ಯೆಯಂತೆ ಪ್ಯಾಕೇಟ್ ಮಾಡಿ ಮೌಲ್ಯಮಾಪಕರಿಗೆ ಮೌಲ್ಯಮಾಪನಕ್ಕಾಗಿ ವಿತರಿಸಲಾಗುತ್ತಿತ್ತು.

2024–25ನೇ ಸಾಲಿನಿಂದ ಸರ್ಕಾರವು ಜಾರಿಗೊಳಿಸಿರುವ SEP ಸ್ಕೀಂನಲ್ಲಿ 03 ಗಂಟೆಗಳ ಅವಧಿಯ 80 ಅಂಕಗಳಿಗೆ ಜನವರಿ/ ಫೆಬ್ರವರಿ 2025 ರಲ್ಲಿ ಜರುಗಿದ ಸ್ನಾತಕ ಪದವಿ ಪರೀಕ್ಷೆ ನಡೆಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಅಧ್ಯಕ್ಷರು, ದಾವಣಗೆರೆ ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಸಂಘ, ಇವರು ಉಲ್ಲೇಖಿತ ಪತ್ರದಲ್ಲಿ SEP ಸ್ಕೀಂ ಸ್ನಾತಕ ಪದವಿ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 16 ಸಂಖ್ಯೆಯಂತೆ ಪ್ಯಾಕೇಟ್ ಮಾಡಿ ಮೌಲ್ಯಮಾಪನಕ್ಕಾಗಿ ವಿತರಿಸಲು ಮನವಿ ಸಲ್ಲಿಸಿರುತ್ತಾರೆ. ತತ್ಸಂಬಂಧವಾಗಿ ಈ ವಿಷಯವನ್ನು ದಿನಾಂಕ:06.02.2025 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ವಿಶೇಷ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

2024–25ನೇ ಸಾಲಿನಲ್ಲಿ ಕರ್ನಾಟಕ ಸರ್ಕಾರವು ಅನುಷ್ಠಾನಕ್ಕೆ ತಂದಿರುವ SEP ಪಠ್ಯಕ್ರಮದ ಸ್ನಾತಕ ಪದವಿ ಪರೀಕ್ಷೆಗಳನ್ನು 03 ಗಂಟೆಗಳ ಪರೀಕ್ಷಾ ಅವಧಿಗೆ 80 ಅಂಕಗಳನ್ನು ನಿಗದಿಪಡಿಸಿ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 16 ಸಂಖ್ಯೆಯಂತೆ ಪ್ಯಾಕೇಟ್ ಮಾಡಿ ಮೌಲ್ಯಮಾಪಕರಿಗೆ ವಿತರಿಸಲು ಸಭೆಯು ನಿರ್ಣಯಿಸಿತು. ಇದಲ್ಲದೇ, B.Ed ಪದವಿ ಪರೀಕ್ಷೆಯಲ್ಲಿಯೂ ಸಹ 03 ಗಂಟೆಗಳ ಪರೀಕ್ಷಾ ಅವಧಿಗೆ 80 ಅಂಕಗಳನ್ನು ನಿಗದಿಪಡಿಸಿ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು 16 ಸಂಖ್ಯೆಯಂತೆ ಪ್ಯಾಕೇಟ್ ಮಾಡಿ ಮೌಲ್ಯಮಾಪಕರಿಗೆ ವಿತರಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕೊನೆಯಲ್ಲಿ ಕುಲಸಚಿವರು(ಆಡಳಿತ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು

ಕುಲಪತಿಗಳು